## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ. 564/2024**

ಸಿ.ಡಬ್ಲ್ಯು 01
ಪಿ.ಡಬ್ಲ್ಯು 02

ಸಾಕ್ಷಿದಾರರ ಹೆಸರು – **ಸುಬ್ರಹ್ಮಣ್ಯ ವೆಂಕಟರಮಣ ಮಡಿವಾಳ**
ತಂದೆಯ ಹೆಸರು – ವೆಂಕಟರಮಣ ಮಡಿವಾಳ
ವಯಸ್ಸು – 47 ವರ್ಷ
ಉದ್ಯೋಗ – ವ್ಯಾಪಾರ
ವಾಸ್ತವ್ಯ – ಹೆಗಡೆ

(ಇಂದು ದಿನಾಂಕಃ **28-02-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಚಾಸಾ 2 ಹಾಗೂ 3 ರವರ ಪರಿಚಯ ಇರುತ್ತದೆ. ಚಾಸಾ 4 ನನ್ನ ಮಾವನಾಗಿರುತ್ತಾರೆ. ಚಾಸಾ 5 ನನ್ನ ಗೆಳೆಯ. ಚಾಸಾ 6 ನನ್ನ ಹೆಂಡತಿ. ಆರೋಪಿತರ ಪರಿಚಯ ಇದೆ,

ನಾನು ಮೊದಲಿನಿಂದಲೂ ಸಣ್ಣ ಪುಟ್ಟ ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದು, ನನ್ನ ಕೆಲಸಕ್ಕೆ ಬೇಕಾಗುವಂತಹ ಕಬ್ಬಿಣ ಹಾಗೂ ಸಿಮೆಂಟಗಳನ್ನು ಆರೋಪಿತರ ಅಂಗಡಿಯಿಂದ ಖರೀದಿ ಮಾಡುತ್ತಿದ್ದೇನು. ನಾನು ಲಾಕ್ ಡೌನ ಸಂದರ್ಭದಲ್ಲಿ ಆರೋಪಿತರ ಅಂಗಡಿಯಿಂದ ಸುಮಾರು

10 ಸಾವಿರ ದಷ್ಟು ಮೌಲ್ಯದ ಕಬ್ಬಿಣ ಹಾಗೂ ಸಿಮೆಂಟನ್ನು ಸಾಲ ಮಾಡಿಕೊಂಡು ತಗೆದುಕೊಂಡು ಹೋಗಿರುತ್ತೇನೆ. ನನಗೆ ಕೆಲಸ ಸ್ವಲ್ಪ ವಿಳಂಬವಾಗಿ ನಷ್ಟ ಉಂಟಾಗಿರುವುದರಿಂದ ನನಗೆ ಸದ್ರಿ ಹವನ್ನು ಮರು ಪಾವತಿ ಮಾಡಲು ಆಗಿರುವುದಿಲ್ಲ. ಅದರ ಒಂದು ತಿಂಗಳ ನಂತರ ಆರೋಪಿತರು ನನಗೆ ಸಿಕ್ಕ ಸಿಕ್ಕಲ್ಲಿ ಬೋಳಿಮಕ್ಕಳೇ, ಸೂಳೇ ಮಕ್ಕಳೇ ಎಂದು ಕೆಟ್ಟ ಕೆಟ್ಟ ಶಬ್ದಗಳಿಂದ ಬೈಯುತ್ತಿದ್ದರು. ನಂತರ ನಾನು ಆರೋಪಿತರಿಗೆ ಬೇರ ಬೇರೆಯವರ ಕೈಯಿಂದ ಸಾಲವನ್ನು ಮಾಡಿಕೊಂಡು 8 ಸಾವಿರ ರೂಪಾಯಿ ಸಾಲವನ್ನು ಮಾಡಿ ಮರು ಪಾವತಿ ಮಾಡಿರುತ್ತೇನೆ, ನಂತರ 2 ಸಾವಿರ ರೂಪಾಯಿ ಬಾಕಿ ಇರುತ್ತದೆ.

ದಿನಾಂಕಃ 25/11/2023 ರಂದು ಸುಮಾರು ಬೆಳಿಗ್ಗೆ 10-30 ಯಿಂದ 11-30 ಒಳಗೆ ನಾನು ಮಚ್ಚಗೋಣಿನ ಹತ್ತಿರ ನನ್ನ ಬೈಕನ್ನು ರಿಪೇರಿ ಮಾಡಲು ಹೋಗಿದ್ದು, ಅಲ್ಲೆ ಪಕ್ಕದಲ್ಲಿ 1ನೇ ಆರೋಪಿತನು ತಿಂಡಿಯನ್ನು ತರಲು ಬಂದಿದ್ದರು. ಆಗ 1ನೇ ಆರೋಪಿತನು ನನ್ನನ್ನು ಉದ್ದೇಶಿಸಿ ನನ್ನ ಅಂಗಿಯ ಕಾಲರನ್ನು ಹಿಡಿದುಕೊಂಡು ಬೋಳಿಮಗನೇ ಸೂಳೇ ಮಗನೇ ಎಂದು ನನಗೆ ಈಗಲೇ 2 ಸಾವಿರ ಕೊಡಬೇಕು ಇಲ್ಲದೇ ಇದ್ದಲ್ಲಿ ಅಂಗಡಿಯ ಹತ್ತಿರ ಬಾ ನಿನ್ನನ್ನು ಕಟ್ಟಿ ಹಾಕುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ.

ನಂತರ ನಾನು ಆರೋಪಿತರ ಅಂಗಡಿಯ ಪಕ್ಕದಲ್ಲಿ ನಮ್ಮ ಮನೆಗೆ ನಡೆದುಕೊಂಡು ಹೋಗುತ್ತಿದ್ದು, ಆರೋಪಿತರು ಆಗ ಬಂದು ರಸ್ತೆಯಿಂದ ನನ್ನನ್ನು ಎಳೆದುಕೊಂಡು ಅವರ ಅಂಗಡಿಗೆ ಕರೆದುಕೊಂಡು ಹೋಗಿರುತ್ತಾರೆ. ಆಮೇಲೆ ನನ್ನ ಹಾಗೂ ಆರೋಪಿತರ ನಡುವೆ ಸಣ್ಣ ಪುಟ್ಟ ವಾದವಾಗಿದ್ದು, 1 ನೇ ಆರೋಪಿತನು ನನಗೆ ಬೆನ್ನಿನ ಮೇಲೆ ಹೊಡೆದಿದ್ದು ನನಗೆ ಶರ್ಟ್ ನ್ನು ಹಿಡಿದು ಎಳೆದಿದ್ದು, 2ನೇ ಆರೋಪಿತನು ತನ್ನ ಬಲಗೈಯಿಂದ ನನ್ನ ಎಡಗನ್ನಿಗೆ ಹೊಡೆದು ದೂಡಿ ಹಾಕಿರುತ್ತಾನೆ. ಆಗ ಚಾಸಾ 4 ಹಾಗೂ 5 ರವರು ಬಂದು ನನ್ನನ್ನು ಗಲಾಟೆಯಿಂದ ತಪ್ಪಿಸಿದ್ದು,

ನಂತರದಲ್ಲಿ ಚಾಸಾ 6 ರವರು ಬಂದಿರುತ್ತಾರೆ. ಆರೋಪಿತರು ನನ್ನ ಶರ್ಟನ್ನು ಹರಿದಿರುತ್ತಾರೆ. ನಂತರ ಚಾಸಾ 6 ರವರು ನನ್ನನ್ನು ನನ್ನ ಮಾವನ ಆಟೋದಲ್ಲಿ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಪೂರ್ವದಲ್ಲಿ ನನ್ನ ಮಾವನವರು ಆರೋಪಿತರ ಬಳಿ ಯಾಕೆ ಹೊಡೆಯುತ್ತಿದ್ದೀರಿ ಎಂದು ಕೇಳಿದಾಗ ಇಷ್ಟಕ್ಕೆ ಬಿಡುವುದಿಲ್ಲ ಕೊಲೆ ಮಾಡುವುದಾಗಿ ಬಾಯಿಗೆ ಬಂದ ರೀತಿಯಲ್ಲಿ ಮಾತನಾಡಿರುತ್ತಾರೆ. ಆರೋಪಿತರು ನನ್ನ ಕೆನ್ನೆಗೆ ಹೊಡೆದಿರುವುದರಿಂದ ನನ್ನ ಎಚ್ಚರ ತಪ್ಪಿದ್ದು, ನನ್ನ ಕಿವಿಯಲ್ಲಿ ರಕ್ತ ಬಂದಿರುತ್ತದೆ.

ನಂತರ ನಾವು ಆಸ್ಪತ್ರೆಗೆ ಹೋದ ಸಂದರ್ಭದಲ್ಲಿ ಕಿವಿಯಲ್ಲಿ ರಕ್ತ ಬಂದಿರುವುದರಿಂದ ಫಿರ್ಯಾದನ್ನು ನೀಡಬೇಕು ಎಂದು ತಿಳಿಸಿರುವುದರಿಂದ ದೂರನ್ನು ನೀಡಬೇಕು ಎಂದು ತಿಳಿಸಿರುವುದರಿಂದ ನಾನು ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲಾತಿಯು **ದೂರಾಗಿದ್ದು**, ಅದನ್ನು **ನಿ.ಪಿ.1 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.1ಎ ಎಂದು** ಗುರುತಿಸಲಾಯಿತು.

ಮರುದಿನ ಪೊಲೀಸರು ಪಂಚನಾಮೆಗಾಗಿ ಬಂದಿದ್ದು, ನನ್ನನ್ನು ಬರುವಂತೆ ತಿಳಿಸಿರುವುದರಿಂದ ನಾನು ಘಟನಾ ಸ್ಥಳಕ್ಕೆ ಬಂದಿರುತ್ತೇನೆ. ಅಲ್ಲಿ ಚಾಸಾ 2 ಹಾಗೂ 3, ಹಾಗೂ ಚಾಸಾ 6 ರವರು ಘಟನಾ ಸ್ಥ.ಳದಲ್ಲಿ ಇದ್ದರು. ಆ ಸಂದರ್ಭದಲ್ಲಿ ನಾನು ನನ್ನ ಹರಿದ ಶರ್ಟನ್ನು ಪೊಲೀಸರಿಗೆ ನೀಡಿದ್ದು, ಪೊಲೀಸರು ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ, ಭಾವಚಿತ್ರವನ್ನು ತೆಗೆದಿದ್ದು ಈ ಕುರಿತಾಗಿ ನನಾು ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಯು ನಿಪಿ1 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ1ಬಿ ಎಂದು ಗುರುತಿಸಲಾಯಿತು. ನಿಪಿ2 ಹಾಗೂ 3 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ

ಮುಂದೆ ಇರುವ ಮುದ್ದೇಮಾಲನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು **ಮು.ಮಾ.1** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು **ಮು.ಮಾ.1ಎ** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಶ್ರೀ ಬಿ.ಡಿ.ಎಸ್.ವಕೀಲರು ಶ್ರೀ.ಆರ್.ಜಿ.ಎನ್ ವಕೀಲರ ಪರವಾಗಿ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಭಾರ ಪ್ರಧಾನ ಪ್ರ.ದ.ನ್ಯಾ.ದಂ. ಕುಮಟಾ